**ಇಪಿ ನಂಃ 03/2019**

**ಎಡಬ್ಲೂಃ 01 (Third Party Applicant witness No.1)**

**ಸಾಕ್ಷಿಗೆ ದಿನಾಂಕ 18-04-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆ Third Party applicant ಪರ ಶ್ರೀಮತಿ. ಪಿ.ಎಲ್.ಸಿ.ವಕೀಲರಿಂದಃ**

ನಾನು ಸರ್ವೆ ನಂಃ 59/9 ಕ್ಕೆ ಸಂಬಂಧಿಸಿದ 2006-07 ರಿಂದ 2023-24 ರವರೆಗೆ ಒಟ್ಟು 17 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಎಪಿ-1 ರಿಂದ ಎಪಿ-17 ಎಂದು ಗುರುತಿಸಲಾಯಿತು. ಒಂದು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ಎಪಿ-18 ಎಂದು ಗುರುತಿಸಲಾಯಿತು. ಒಂದು ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ಎಪಿ-19 ಎಂದು ಗುರುತಿಸಲಾಯಿತು. ಒಂದು ಆಧಾರ ಕಾರ್ಡನ್ನು ಹಾಜರುಪಡಿಸಿದ್ದು ಅದನ್ನು ಎಪಿ-20 ಎಂದು ಗುರುತಿಸಲಾಯಿತು.

**ಇಪಿ ನಂಃ 03/2019**

**ಎಡಬ್ಲ್ಯೂಃ 01 (Third Party Applicant witness No.1)**

**<u>ಪಾಟೀ ಸವಾಲುಃ ಡಿಹೆಚಆರ ಪರ ಶ್ರೀಮತಿ. ಎಂ.ವಿ.ಎಲ್. ವಕೀಲರಿಂದ</u>**

ಡಿಹೆಚ್ಆರ ಪರ ವಕೀಲರು ಪಾಟೀ ಸವಾಲನ್ನು ಮಧ್ಯಾಹ್ನ 02.45 ಗಂಟೆಗೆ ಮಾಡುವುದಾಗಿ ನಿವೇದಿಸಿಕೊಂಡಿರುವುದರಿಂದ ಪಾಟೀ ಸವಾಲನ್ನು ಮಧ್ಯಾಹ್ನ 02.45 ಗಂಟೆಗೆ ಮುಂದೂಡಲಾಯಿತು. (ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.

**ಇಪಿ ನಂಃ 03/2019**
**ಎಡಬ್ಲೂಃ 01 (Third Party Applicant witness No.1)**

**ಸಾಕ್ಷಿಗೆ ದಿನಾಂಕ 18-04-2024 ರಂದು ಪುನಃ ಮಧ್ಯಾಹ್ನ 02.45 ಗಂಟೆಗೆ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಸಾಕ್ಷಿಗೆ ಕೇವಲ ಹಿಂದಿ ಭಾಷೆ ಬರುತ್ತಿದ್ದು, ಶ್ರೀ. ಜಿ.ಎಸ್. ವಕೀಲರನ್ನು ಭಾಷಾಂತರಗಾರರನ್ನಾಗಿ ನೇಮಿಸಲಾಯಿತು. ಅವರಿಗೂ ಸಹ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಡಿಹೆಚಆರ ಪರ ಶ್ರೀಮತಿ. ಎಂ.ವಿ.ಎಲ್. ವಕೀಲರಿಂದ**

ನನ್ನ ತಂದೆಯ ಹೆಸರು ಮಹ್ಮದ ಯುಸೂಫ ಎಂದರೆ ಸರಿ. ನನ್ನ ತಾಯಿಯ ಹೆಸರು ಅಮಿದಾ ಬೇಗಂ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ಹಫೀಜಾ ಬೇಗಂ ಇರುತ್ತದೆ ಎಂದು

ನುಡಿಯುತ್ತಾರೆ.

**-06-**

**ಇಪಿ ನಂಃ 03/2019**
**ಎಡಬ್ಲೂಃ 01 (Third Party Applicant witness No.1)**

ಶೇಖ್ ಮೆಹಬೂಬ ಇತನು ಸುಮಾರು 13 ವರ್ಷಗಳ ಹಿಂದೆ ಮರಣಹೊಂದಿರುತ್ತಾನೆ. ಸದರಿ ಶೇಖ ಮೆಹಬೂಬ ಇತನ ಮರಣ ಪ್ರಮಾಣ ಪತ್ರವನ್ನು ಪಡೆಯಲು ನಾನೇ ಅರ್ಜಿಯನ್ನು ನೀಡಿರುತ್ತೇನೆ. ಸದರಿ ಅರ್ಜಿಯಲ್ಲಿ ಶೇಖ್ ಮೆಹಬೂಬ ಇತನ ತಾಯಿಯ ಹೆಸರನ್ನು ನಮೂದು ಮಾಡಿರುತ್ತಾರೋ ಅಥವಾ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

ಶೇಖ್ ಮೆಹಬೂಬ ಇತನ ತಂದೆ ಫತ್ರು ಪಟೇಲ್ ಇತನು ಮರಣಹೊಂದಿ ಸುಮಾರು 5 ವರ್ಷಗಳಾಗಿರುತ್ತವೆ. ಮೊದಲು ಶೇಖ ಮೆಹಬೂಬ ಇತನು ಮರಣಹೊಂದಿದ್ದು, ನಂತರ ಆತನ ತಂದೆ ಫತ್ರು ಪಟೇಲ್ ಮರಣಹೊಂದಿರುತ್ತಾರೆ ಎಂದರೆ ಸರಿ.

ನನ್ನ ಪತಿ ಮರಣಹೊಂದಿದ ನಂತರ ನಾನು ಶಹಾಬಾದನ ಇಬ್ರಾಹಿಂ ಮಸೀದಿ ಹೆಚ ಎಂ ಪಿ ಕಾಲೋನಿಯಲ್ಲಿ ಮಹ್ಮದ ಅಯೂಬ ತಂದೆ ಮಹ್ಮದ ಯುನೂಸ ಇತನೊಂದಿಗೆ ಎರಡನೇ ಮದುವೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮಹ್ಮದ ಅಯೂಬ ಇತನದು ಸಹ ಎರಡನೇ ಮದುವೆ ಆಗಿತ್ತು ಎಂದರೆ ಸರಿಯಲ್ಲ.

ಫತ್ರು ಸಾಬ ತಂದೆ ಇಸ್ಮಾಯಿಲ್ ಸಾಬ ಇತನಿಗೆ ಸರ್ವೆ ನಂಃ 59/8 ರ 5 ಎಕರೆ 9 ಗುಂಟೆ ಜಮೀನು ಇತ್ತು ಎಂದರೆ ಸರಿಯಲ್ಲ. ಸರ್ವೆ ನಂಃ 59/6 ಮತ್ತು 59/7 ರಂತೆ 36 ಗುಂಟೆ, 1 ಎಕರೆ 12 ಗುಂಟೆ ಜಮೀನು ಸದರಿ ಫತ್ರು ಸಾಬ ತಂದೆ ಇಸ್ಮಾಯಿಲ್ ಸಾಬ ಇತನ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ.

ಸರ್ವೆ ನಂಃ 59/8 ರ 5 ಎಕರೆ 9 ಗುಂಟೆ ಜಮೀನನ್ನು ಫತ್ರು ಸಾಬ ಆತನ ಮಗ ಶೇಖ

ಮೆಹಬೂಬ ತಂದೆ ಫತ್ರು ಸಾಬ ಇತನ ಹೆಸರಿಗೆ ಮಾಡಿದ್ದನು ಎಂದರೆ ನನಗೆ ಗೊತ್ತಿರುವುದಿಲ್ಲ.

**ಇಪಿ ನಂಃ 03/2019**
**ಎಡಬ್ಲೂಃ 01 (Third Party Applicant witness No.1)**

ಶೇಖ್ ಮೆಹಬೂಬ ಇತನು ದಿಃ 13-09-2009 ರಂದು ಮಾಡಬೂಳ ಗ್ರಾಮದಲ್ಲಿ ಮರಣಹೊಂದಿದ್ದನು ಎಂದರೆ ಸರಿಯಲ್ಲ. ಎಪಿ-18 ಅನ್ನು ನಾನು ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಫತ್ರುಸಾಬ ತಂದೆ ಇಸ್ಮಾಯಿಲ್ ಸಾಬ ಇತನ ಮೊದಲನೆ ಹೆಂಡತಿಯ ಹೆಸರು ತಾಹೇರಾ ಬೇಗಂ ಇರುತ್ತದೆ. ಶೇಖ್ ಮೆಹಬೂಬ ಇತನು ತಾಹೇರ ಬೇಗಂ ಇತಳ ಮಗ ಇರುತ್ತಾನೆ ಎಂದರೆ ಸರಿ.

ಜಲೀನಾ ಬೇಗಂ ಇತಳಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಸದರಿ ಜಲೀನಾ ಬೇಗ ಇತಳಿಗೆ ಮಕ್ಕಳು ಆಗಿ ಮರಣಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

ನನ್ನ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ನಾನು ಶೇಖ್ ಮೆಹಬೂಬ ಇತನು ಜಲೀನಾಬೇಗಂ ಇತಳ ಮಗನೆಂದು ಸುಳ್ಳಾಗಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ಓಎಸ್ ನಂಃ 96/2013 ರ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಅಮಲಜಾರಿ ಪ್ರಕರಣ ಇದ್ದುದ್ದರ ಬಗ್ಗೆ ನನ್ನ ಅತ್ತೆಯಾದ ಜಲೀನಾಬೇಗಂ ಇತಳು ತಿಳಿಸಿರುತ್ತಾಳೆ.

ಈ ಅಮಲಜಾರಿ ಪ್ರಕರಣದ ವಿಷಯ ಗೊತ್ತಾಗಿ ಜಲೀನಾಬೇಗಂ ಇತಳು ದಾವಾ ಆಸ್ತಿಯನ್ನು ನನ್ನ ಹೆಸರಿಗೆ 2021 ರಲ್ಲಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. 2005 ಕ್ಕಿಂತ ಮುಂಚೆ ಸರ್ವೆ ನಂಃ 59/9 ರ ಆಸ್ತಿಯು ಫತ್ರುಸಾಬ ಇತನ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಂತರ ಶೇಖ್ ಮೆಹಬೂಬ ಇತನು ತನ್ನ ತಂದೆ ಜೀವಂತ ಇರುವಾಗಲೇ ಸರ್ವೆ ನಂಃ 59/9 ರಲ್ಲಿ ತನ್ನ ಹೆಸರನ್ನು ನಮೂದಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ.

**ಇಪಿ ನಂಃ 03/2019**
**ಎಡಬ್ಲ್ಯೂಃ 01 (Third Party Applicant witness No.1)**

ಶೇಖ್ ಮೆಹಬೂಬ ಇತನು ತನ್ನ ತಂದೆ ಜೀವಂತ ಇದ್ದಾಗ ಮರಣಹೊಂದಿದ್ದರಿಂದ ಆತನಿಗೆ ಸರ್ವೆ ನಂಃ 59/9 ರಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಶೇಖ ಮೆಹಬೂಬ ಇತನು ಮರಣಹೊಂದಿದ ನಂತರ ನಾನು ಇನ್ನೊಂದು ಮದುವೆಯಾಗಿದ್ದು, ನನಗೂ ಸಹ ಸದರಿ ಸರ್ವೆ ನಂಃ 59/9 ರಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.